ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ೮೬–೮೭ರಲ್ಲಿ ೧.೦೦ ಲಕ್ಷ ಪಣ ಒದಗಿಸಿದ್ದು ೩.೬೫ ಲಕ್ಷ ರೂ.ಗಳ ನಷ್ಟ ಮತ್ತು ಆಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ತಾರಕಾ ಜಲಾಶಯಕ್ಕೆ ಕಬಿನಿ ಹಿನ್ನೀರನ್ನು ಏತ ನೀರಾವರಿ ಮೂಲಕ ತರುವ ಬಗ್ಗೆ

೧೫೭ (೩೭೧ ಎ) ಎಂ. ಶಿವಣ್ಣ (ಹೆಗ್ಗಡ ದೇವನಕೋಟೆ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತಾರಕಾ ಜಲಾಶಯಕ್ಕೆ ಕಬಿನಿ ಹಿನ್ನೀರನ್ನು ಏತ ನೀರಾವರಿ ಮೂಲಕ ತರಲು ಆಂದಾಜು ಪಟ್ಟಿ ತಯಾರಿಸಿರುವುದು ನಿಜವೇ, ಹಾಗಿದ್ದಲ್ಲಿ, ಈ ಯೋಜನೆ ಕಾರ್ಯಗತ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಆ) ತಾರಕಾ ಜಲಾಶಯದ ಉದ್ದೇಶಿತ ಅಚ್ಚುಕಟ್ಟು ಪ್ರದೇಶಕ್ಕೆ ಎಡ ಮತ್ತು ಬಲದಂಡೆ ನಾಲೆಗಳಿಂದ ನೀರು ಕೊಡದಿರುವಾಗ ಅನಾವಶ್ಯಕವಾಗಿ ಮತ್ತೊಂದು ಲಿಂಕ್ ಚಾನಲ್ ಮಾಡುತ್ತಿರುವ ಉದ್ದೇಶವೇನು ?

ಇ) ಇದನ್ನು ಎಷ್ಟು ಅಂದಾಜಿನಲ್ಲಿ ಮಾಡಲಾಗುತ್ತಿದೆ, ಇದರಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರೊದಗಿಸಲು ಉದ್ದೇಶಿಸಲಾಗಿದೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು. ಕಾವೇರಿ ಜಲವಿವಾದ ಇತ್ಯರ್ಥವಾದ ನಂತರ ಇದನ್ನು ಪರೀಕ್ಷಿಸಲಾಗುವುದು.

ಆ) ತಾರಕಾ ಜಲಾಶಯದ ಮುಳುಗಡೆ ಪ್ರದೇಶದ ರೈತರಿಗೆ ಕಬಿನಿ ಜಲಾಶಯದ ಮುಂಭಾಗದ ತೀರದಲ್ಲಿ ನೀರಾವರಿ ಸೌಲಭ್ಯ ಒದಗಿಸುವ ಸಲುವಾಗಿ ತಾರಕಾ ಸಂಪರ್ಕ ನಾಲೆಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

೧೨೨೦ ಲಕ್ಷ ರೂ.ಗಳ ತಾರಕಾ ಯೋಜನೆಯ ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಲಾಗಿರುವಂತೆ ತಾರಕಾ ಎಡದಂಡೆ ನಾಲೆ ಮತ್ತು ಸಂಪರ್ಕ ನಾಲೆಯೂ ಸೇರಿದಂತೆ ತಾರಕಾ ಬಲದಂಡೆ ನಾಲೆಗಳ ಮೂಲಕ ಉದ್ದೇಶಿತ ಅಚ್ಚುಕಟ್ಟಿಗೆ ನೀರನ್ನು ಒದಗಿಸಲಾಗುತ್ತಿದೆ.

ಇ) ತಾರಕಾ ಸಂಪರ್ಕ ನಾಲೆಯನ್ನು, ೧೪೧.೩೨ ಲಕ್ಷ ರೂ.ಗಳ ಆಂದಾಜಿನಲ್ಲಿ ಮಾಡಲಾಗುತ್ತಿದೆ. ಇದರಿಂದ ೧೯೨೨ ಹೆಕ್ಟೇರ್ (೪೭೫೦ ಎಕರೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು ಉದ್ದೇಶಿಸಲಾಗಿದೆ.

ವರುಣಾ ನಾಲೆ ಬಗ್ಗೆ

೧೫೮ (೩೭೧ ಎ) ಎಂ. ಶಿವಣ್ಣ (ಹೆಗ್ಗಡ ದೇವನಕೋಟೆ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ವರುಣಾ ನಾಲೆ ಕೆಲಸ ಕಾರ್ಯಗಳಿಗೆ ಇದುವರೆಗೆ ಸರಕಾರ ಖರ್ಚು ಮಾಡಿರುವ ಹಣ ಎಷ್ಟು ?

ಆ) ನಾಲೆಯ ಕಾರ್ಯಪನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗಬಹುದು ?

ಇ) ನಾಲೆಯ ಕೆಲಸವನ್ನು ಶೀಘ್ರದಲ್ಲಿ ಪೂರ್ತಿಗೊಳಿಸಲು ಸರಕಾರದವರು ಯೋಚಿಸಿದ್ದಾರೆಯೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ದೇವರಾಜ ಅರಸ್ (ವರುಣಾ) ನಾಲೆ ಕೆಲಸ ಕಾರ್ಯಗಳಿಗೆ ೧೯೮೬ರ ಡಿಸೆಂಬರ್ ಮಾಹೆಯ ಕೊನೆಯ ತನಕ ಆಗಿರುವ ಖರ್ಚು ೧೫.೬೮ ಕೋಟಿ ರೂಪಾಯಿಗಳು.

ಆ) ಹಣದ ಅನುದಾನವನ್ನು ಅನುಸರಿಸಿ ಕಾರ್ಯವನ್ನು ಸುಮಾರು ೫-೬ ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

ಇ) ಹೌದು.

ಹೊನ್ನಾಳಿ ತಾಲ್ಲೂಕು ನ್ಯಾಮತಿ ಪದವಿಯ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ

೧೫೯೯ (೪೫೫೮) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹೊನ್ನಾಳಿ ತಾಲ್ಲೂಕು ನ್ಯಾಮತಿ ಪಟ್ಟಣಕ್ಕೆ ೧೯೮೭-೮೮ನೇ ವರ್ಷದಿಂದ ಸರ್ಕಾರಿ ಪದವಿ ಕಾಲೇಜನ್ನು (ಕಲೆ ಮತ್ತು ವಿಜ್ಞಾನ) ಪ್ರಾರಂಭಿಸಲು ಸರ್ಕಾರದವರು ಯೋಚಿಸಿದ್ದಾರೆಯೇ ?

ಆ) ತಾಲ್ಲೂಕಿನ ಜನತೆಯು ಅನೇಕ ವರ್ಷಗಳ ಬೇಡಿಕೆಯನ್ನು ಈ ವರ್ಷವಾದರೂ ಈಡೇರಿಸಲಾಗುವುದೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಇಲ್ಲ.

ಆ) ಪರಿಶೀಲಿಸಲಾಗುವುದು.

ಹರಿಹರ ತಾಲ್ಲೂಕಿನ ಕೊಂಡಜ್ಜಿ ಕೆರೆ ಬಗ್ಗೆ

೧೪೦ (೪೭೦) ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಲೋಕೋಪಯೋಗಿ, ಆಜ್ಯ ಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹರಿಹರ ತಾಲ್ಲೂಕಿನ ಕೊಂಡಜ್ಜಿ ಕೆರೆ ಬಗ್ಗೆ ಸ್ಥಳ ಪರಿಶೀಲನೆ ಮಾಡಿದಾಗ ೧೯೮೭ನೇ ಜುಲೈ ತಿಂಗಳೊಳಗಾಗಿ ಭದ್ರವಾದ ಏರಿಯ ಅವಶ್ಯಕತೆಯನ್ನು ಪೂರೈಸಿಕೊಡುವುದಾಗಿ ಆಶ್ವಾಸನೆ ಕೊಟ್ಟಿರುವುದು ಸರ್ಕಾರದವರ ಗಮನದಲ್ಲಿದೆಯೇ ?

ಆ) ಏರಿಯನ್ನು ಎತ್ತರಿಸಿ ಕಲ್ಲಿನಿಂದ ಭದ್ರವಾದ ಕಟ್ಟಡ ಕಟ್ಟಿ ಹೆಚ್ಚು ನೀರು ಸಂಗ್ರಹಿಸುವ ಏರ್ಪಾಡು ಮಾಡಿದ್ದಲ್ಲಿ ಅನುಕೂಲವಾಗುವುದೆಂದು ಅಕ್ಕ ಪಕ್ಕದಲ್ಲಿರುವ ಗ್ರಾಮಸ್ಥರು ತಮ್ಮಲ್ಲಿ ತಿರಿಕೆ ಮಾಡಿಕೊಂಡಿದ್ದುದು ಸರ್ಕಾರದವರ ಗಮನದಲ್ಲಿದೆಯೇ ?

ಇ) ಕೆರೆ ಏರಿ ಒಡೆಯುವ ಸ್ಥಿತಿಯನ್ನು ಗಮನಿಸಿ ಇದೇ ರೀತಿ ಮುಂದುವರೆದರೆ ೩-೪ ಗ್ರಾಮಗಳು ಒಡೆದು ಕೊಚ್ಚಿ ಹೋಗುವ ಪ್ರಸಂಗವಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಿ ಶೀಘ್ರವಾಗಿ ಈ ಕೆಲಸವನ್ನು ಪೂರೈಸಲಾಗುವುದೇ ?

ಶ್ರೀ ಹೆಚ್. ಡಿ. ದೇವೆ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಹೌದು.